ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 13.02.2024.

**ಮುಂದುವರೆದ ಮುಖ್ಯ ವಿಚಾರಣೆ:** ಪ್ರತಿವಾದಿ ಪರ ಶ್ರೀ ಎ.ಡಬ್ಲ್ಯೂ.ಎ. ವಕೀಲರಿಂದ:

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ನನ್ನ ಕುಟುಂಬದ ಪಡಿತರ ಚೀಟಿಯನ್ನು ನಿಡಿ-1 ಎಂದು, ನನ್ನ ಅಜ್ಜ ಮೌಲಾಸಾಬ ರವರ ಮರಣ ಪ್ರಮಾಣ ಪತ್ರವನ್ನು ನಿಡಿ-2 ಎಂದು, ವಂಶವೃಕ್ಷದ ದೃಢೀಕರಣವನ್ನು ನಿಡಿ-3 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯರ ದಾವೆಯನ್ನು ವಜಾ ಮಾಡಿ ನಾವು ಕೇಳಿದಂತೆ ಕೌಂಟರ್ ಕ್ಲೇಮನ್ನು ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು:** ವಾದಿಯರ ಪರ ಶ್ರೀ ವಿ.ಡಿ.ಕೆ. ವಕೀಲರಿಂದ:

ವಾದಿಯರು ನನ್ನ ಅತ್ತೆಯರು ಅಂದರೆ ನನ್ನ ತಂದೆಯ ಸಹೋದರಿಯರು ಇರುತ್ತಾರೆ. ದಾವಾ ಸ್ವತ್ತುಗಳು ಈ ಮೊದಲು ನನ್ನ ಅಜ್ಜನ ಹೆಸರಿನಲ್ಲಿ ಇದ್ದವು. ನನ್ನ ಅಜ್ಜ ಮೌಲಾಸಾಬ ರವರಿಗೆ ಒಬ್ಬ ಗಂಡು ಮಗ ಮತ್ತು ಎರಡು ಜನ ಹೆಣ್ಣು ಮಕ್ಕಳು ಇದ್ದರು. 6 ಮತ್ತು 7 ನೇ ಪ್ರತಿವಾದಿಯರು ಮೌಲಾಸಾಬ ರವರಿಗೆ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಯರ ಹಕ್ಕು ಇರುತ್ತದೆ ಎಂದರೆ, ಸಾಕ್ಷಿ ನನ್ನ ಅಜ್ಜ ಹಕ್ಕು ಇದೆ ಎಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಅಜ್ಜ ಮೌಲಾಸಾಬ ಮತ್ತು ನನ್ನ ಅಜ್ಜಿ ಮೌಲಂಬೀ ತಿರಿಕೊಂಡ ನಂತರ ವಾದಿಯರಿಗೆ ಯಾವುದೇ ಪಾಲು ಕೊಡಲಿಲ್ಲ ಎಂದರೆ,

ಸಾಕ್ಷಿ ಕೊಡುತ್ತೇವೆ ಎಂದು ಹೇಳಿದ್ದರು, ಅಷ್ಟರಲ್ಲಿ ವಾದಿಯರು ಈ ದಾವೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

1997 ರಲ್ಲಿ ದಾವಾ ಸ್ವತ್ತುಗಳನ್ನು ನನ್ನ ಅಜ್ಜ ಮೌಲಾಸಾಬ ರವರು ನನ್ನ ತಂದೆಗೆ ಮೌಖಿಕ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೌಖಿಕ ಹಿಭಾ ಮಾಡಿದ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ, ಅದರೆ ಬಾಯಿ ಮಾತಿನ ಮುಖಾಂತರ ಹೇಳಿದ್ದರು. ನನ್ನ ಅಜ್ಜ ಮೌಖಿಕ ಹಿಭಾ ಮಾಡಿಕೊಟ್ಟಿದ್ದರು ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾವು ವಾದಿಯರಿಗೆ ಅವರ ಪಾಲಿನ ಹಿಸ್ಸಾ ಕೊಡದೇ ಇರುವ ಕಾರಣ ಅವರು ಈ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಮೌಲಾಸಾಬ ತಿರಿಕೊಂಡ ನಂತರ ದಾವಾ ಸ್ವತ್ತುಗಳಲ್ಲಿ ಯಾವುದೇ ಹಿಸ್ಸೆ ಆಗಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಾದಿಯರಿಗೆ ಯಾವುದೇ ಹಕ್ಕು ಹಿತಾಸಕ್ತಿ ಭಾಗ ಇರುವುದಿಲ್ಲ ಎಂದು ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. 8 ರಿಂದ 10 ನೇ ಪ್ರತಿವಾದಿಯರು ನನ್ನ ಗೊತ್ತಿಲ್ಲ. 6 ಮತ್ತು 7 ನೇ ಪ್ರತಿವಾದಿಯರು 8 ರಿಂದ 10 ನೇ ಪ್ರತಿವಾದಿಯರಿಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು, ವಾದಿಯರು ಈ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ, ಸಾಕ್ಷಿ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ.

ಮೌಲಾಸಾಬ ತಿರಿಕೊಂಡ ನಂತರ ಆತನ ವಾರಸುದಾರರಾದ ವಾದಿಯರು ಹಾಗೂ 1 ರಿಂದ 5 ನೇ ಪ್ರತಿವಾದಿಯರು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಮೌಲಾಸಾಬ ತಂದೆ ಹೆಸರು ದಾವಲ್ ಸಾಬ ಇರುತ್ತದೆ. ದಾವಲ್ ಸಾಬ ರವರ ಹೆಂಡತಿಯ ಹೆಸರು ಮದರಬೀ ಇರುತ್ತದೆ. ನನ್ನ ಅಜ್ಜಿ ಹೆಸರು ಮೌಲಂಬೀ ಇರುತ್ತದೆ. ಚಾಂದಬೀ ರವರು ನಮಗೆ ಸಂಬಂಧ ಇಲ್ಲ. ನನ್ನ ಅಜ್ಜ ಮೌಲಾಸಾಬ ರವರು ನನ್ನ ತಂದೆಗೆ ಮೌಖಿಕ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 8 ಮತ್ತು 9 ನೇ ಪ್ರತಿವಾದಿಯರ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದಃ

ಸರ್ವೆ ನಂ.16/6 ಇದು ನನ್ನ ಅಜ್ಜ ಮೌಲಾಸಾಬ ರವರ ಕೊಂಡುಕೊಂಡ ಸ್ವತ್ತು ಎಂದರೆ ಸರಿ. ನನ್ನ ಅಜ್ಜ 1979 ರಲ್ಲಿ ಮಹಾದೇವ ರುಕ್ಕಪ್ಪ ರವರಿಂದ ಕೊಂಡುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಸದರಿ ಸ್ವತ್ತುನ್ನು ಕೊಂಡುಕೊಂಡ ನಂತರ ತನ್ನ ಇಬ್ಬರು ಹೆಂಡತಿಯರಾದ ಮೌಲಾಂಬೀ ಮತ್ತು ಚಾಂದಬಿ ರವರ ಮಕ್ಕಳ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೌಲಾಂಬೀಗೆ ಮೂರು ಜನ ಮಕ್ಕಳು ಅವರೇಂದರೆ, ವಾದಿಯರು ಮತ್ತು ನನ್ನ ತಂದೆ ಅಮೀರ ಅಲಿ ಇರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ಅಜ್ಜ ಮೌಲಾಸಾಬ ರವರಿಗೆ 2 ನೇ ಹೆಂಡತಿ ಚಾಂದಬೀ ಇದ್ದು ಅವಳಿಗೆ ಮೂರು ಜನ ಮಕ್ಕಳು ಅವರೆಂದರೆ, 6 ಮತ್ತು 7 ನೇ ಪ್ರತಿವಾದಿಯರು ಹಾಗೂ ಮಮತಾಜ ಎಂಬ ಮಗಳು ಇದ್ದಳು ಎಂದರೆ ಸರಿಯಲ್ಲ.

ಮೌಲಾಂಬೀ ಮತ್ತು ಚಾಂದಬೀ ರವರು 2002 ರಲ್ಲಿ ಕೂಡಿಯೇ ಇದ್ದರು ಎಂದರೆ

ಸರಿಯಲ್ಲ. 2002 ನೇ ಸಾಲಿನಲ್ಲಿ ಚಾಂದಬೀ ಮತ್ತು ಮೌಲಾಂಬೀ ಇಬ್ಬರು ಸೇರಿ 8 ಮತ್ತು 9 ನೇ ಪ್ರತಿವಾದಿಯರಿಗೆ ದಿಃ 02.04.2002 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳಿಗೆ 1 ನೇ ಪ್ರತಿವಾದಿ, ಮೌಲಾಸಾಬ ಮತ್ತು ಚಾಂದಬೀ ಹಾಗೂ ಮೌಲಾಂಬೀ ಎಲ್ಲರು ಸೇರಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಊರಿನ ಹಿರಿಯರಾದ ನೀಲಕಂಠ ಪಾಟೀಲ್, ನಾಗೇಂದ್ರಪ್ಪ ರೆಡ್ಡಿ, ಶಂಕರ ಮಾಂತಗೋಳ, ಸಿದ್ದಣ್ಣ ಪಾಟೀಲ್, ವಸಂತರಾವ್ ಕೋನೆಕರ್ ರವರು ಸಾಕ್ಷಿದಾರರು ಅಂತ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು 10 ನೇ ತರಗತಿ ಫೇಲಾಗಿರುತ್ತೇನೆ. ಜಮೀನಿನ ಪಹಣಿಗಳು ನನಗೆ ಓದಲು ಬರುವುದಿಲ್ಲ. ನನ್ನ ಜನ್ಮ ದಿನಾಂಕ ನನಗೆ ನೆನಪು ಇಲ್ಲ, ಆದರೆ 1986 ರಲ್ಲಿ ಇರಬಹುದು. ನಾನು 2002 ನೇ ಸಾಲಿನಲ್ಲಿ 20 ವರ್ಷದವನು ಇದ್ದೇನು ಎಂದರೆ ಸರಿಯಲ್ಲ. ನನ್ನ ಜನ್ಮ ದಾಖಲೆ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 2002 ನೇ ಸಾಲಿನಲ್ಲಿ 8 ಮತ್ತು 9 ನೇ ಪ್ರತಿವಾದಿಯರ ಹೆಸನರಿಲ್ಲಿ ಮ್ಯೂಟೇಷನ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ವೈಜಾಪುರಕ್ಕೆ ಹೋಗಿರುತ್ತೇನೆ, ಅಲ್ಲದೇ ಸದ್ಯ ಹೋಗಿ ತೋಗರಿ ರಾಶಿ ಮಾಡಿಕೊಂಡು ಬಂದಿರುತ್ತೇನೆ.

8 ಮತ್ತು 9 ನೇ ಪ್ರತಿವಾದಿಯರ ಜಮೀನುಗಳನ್ನು ನಾನು ನೋಡಿಲ್ಲ. 8 ಮತ್ತು 9 ನೇ ಪ್ರತಿವಾದಿಯರು ತಾವು ಕೊಂಡುಕೊಂಡಿರುವ ಜಮೀನಿನಲ್ಲಿ ಬಾವಿ ತೋಡಿಸಿ, ಕಬ್ಬು ಬೆಳೆ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. 2002 ರಿಂದಇ ಲ್ಲಿಯವರೆಗೂ 8 ಮತ್ತು 9 ನೇ ಪ್ರತಿವಾದಿಯರೇ ತಾವು ಕೊಂಡುಕೊಂಡಿರುವ ಜಮೀನಿನ ಕಬ್ಜೆಯಲ್ಲಿ ಇರುತ್ತಾರೆ ಎಂದರೆ

ಸರಿಯಲ್ಲ. ನಾನು ದಾವಾ ಸ್ವತ್ತುಗಳ ಕಬ್ಜೆಯಲ್ಲಿ ಇರುತ್ತೇನೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. 8 ಮತ್ತು 9ನೇ ಪ್ರತಿವಾದಿಯರು ತಾವು ಕೊಂಡುಕೊಂಡಿರುವ ಜಮೀನಿನಲ್ಲಿ ನಾನು ಎಂದೂ ಕಬ್ಜಾ ಇರುವುದಿಲ್ಲ ಎಂದರೆ ಸರಿಯಲ್ಲ.

2002 ರಿಂದ ಈ ಕೇಸ್ ಹಾಕುವವರೆಗೂ 8 ಮತ್ತು 9ನೇ ಪ್ರತಿವಾದಿಯರ ಮೇಲೆ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. 8 ಮತ್ತು 9ನೇ ಪ್ರತಿವಾದಿಯರ ಜಮೀನನ್ನು ನುಂಗಿ ಹಾಕುವ ಸಲುವಾಗಿ ನಾನೇ ಕಬ್ಜೆಯಲ್ಲಿ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 8 ಮತ್ತು 9ನೇ ಪ್ರತಿವಾದಿಯರ ಮೇಲೆ ನನ್ನ ಅಜ್ಜ ಬದುಕಿರೋವರೆಗೆ ಯಾವುದೇ ಕೇಸ್ ಮಾಡಿರುವುದಿಲ್ಲ. ಏಕೆಂದರೆ ನಾವೇ ಕಬ್ಜೆಯಲ್ಲಿ ಇದ್ದೇವು ಎಂದು ನುಡಿಯುತ್ತಾರೆ. ನಾನೇ ಕಬ್ಜೆಯಲ್ಲಿ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2013 ರಿಂದ 10 ವರ್ಷಗಳವರೆಗೆ ನಾವು ಯಾವುದೇ ಕೇಸ್ ಮಾಡಿಲ್ಲ ಎಂದರೆ ಸರಿ.

ನಾವು ಎಂದೂ 8 ಮತ್ತು 9ನೇ ಪ್ರತಿವಾದಿಯರ ಜಮೀನುಗಳಲ್ಲಿ ಕಬ್ಜಾ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಲಬುರಗಿಯಲ್ಲಿ ಇರುತ್ತೇನೆ. ನಾನು ಕಬ್ಜೆಯಲ್ಲಿ ಇರುತ್ತೇನೆ ಎಂದು ಹೇಳಿದ್ದು, ನನ್ನದು ಸ್ವಂತ ಒಕ್ಕಲುತನ ಇರುತ್ತದೆ. ನಾನು ಟ್ರ್ಯಾಕ್ಟರ್ ಮುಖಾಂತರ ಸಾಗುವಳಿ ಮಾಡುತ್ತಿದ್ದೇನೆ. ನಾನು ಕಬ್ಬು ಮತ್ತು ಮೆಣಸಿನಕಾಯಿ, ಉಳ್ಳಗಡ್ಡಿ ಹಾಗೂ ಇತರೆ ತರಕಾರಿಗಳನ್ನು ಬೆಳೆಯುತ್ತಿದ್ದೇನೆ. ನಾನು ಕಬ್ಬನ್ನು ಸಾಗಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು ಮೇಲೆ ಹೇಳಿದ ಬೆಳೆಗಳನ್ನು ದಾವಾ ಸ್ವತ್ತಿನಲ್ಲಿ ಬೆಳೆಯುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ.16/6 ರ ಪೂರ್ವ ದಿಕ್ಕಿಗೆ ಯಾರ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.16/6 ರ ಚತುರ ಸೀಮೆ ನನಗ ಗೊತ್ತಿಲ್ಲ. ದಾವಾ ಸ್ವತ್ತು ಮಾತೃಕಾ ಆಸ್ತಿ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಮಾತೃಕಾ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಮೌಲಾಸಾಬ 1997 ರಲ್ಲಿ ನನ್ನ ತಂದೆ ಅಮೀರ್ ಅಲಿ ರವರಿಗೆ ಹಿಭಾ ಮಾಡಿಕೊಟ್ಟಿರುತ್ತಾರೆ. ಸದರಿ ಹಿಭಾ ಮಾಡಿಕೊಟ್ಟ ದಿನಾಂಕ ತಿಂಗಳು ನನಗೆ ಗೊತ್ತಿಲ್ಲ. ಸದರಿ ಹಿಭಾವನ್ನು ನನ್ನ ಅಜ್ಜ ಊರ ಹಿರಿಯರ ಸಮಕ್ಷಮ ಹಾಗೂ ಅಣ್ಣ-ತಮ್ಮಂದಿರ ಸಮಕ್ಷಮ ಮಾಡಿಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ 1997 ರಲ್ಲಿ ನನ್ನ ಅಜ್ಜ ನನ್ನ ತಂದೆಗೆ ಹಿಭಾ ಮಾಡಿಕೊಟ್ಟಿರುತ್ತಾನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಆಗಲಿ ಅಥವಾ ಪ್ರತಿವಾದ ಪತ್ರದಲ್ಲಿ ಆಗಲಿ ಹೇಳಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಕಂದಾಯ ರಶೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ದಾವೆ ಹಾಕಿದ ನಂತರ ಖರೀದಿ ಪತ್ರದ ಬಗ್ಗೆ ಗೊತ್ತಾಗಿರುತ್ತದೆ. 1997 ರಲ್ಲಿ ನನ್ನ ಅಜ್ಜ ನನ್ನ ತಂದೆಗೆ ಹಿಭಾ ಮಾಡಿಕೊಟ್ಟಿದ್ದರ ಬಗ್ಗೆ ಪಹಣಿಗಳು ದಾಖಲಾಗಿಲ್ಲ ಎಂದರೆ ಸರಿ. ನಮಗೂ ಕೂಡಾ ಹಿಭಾದ ಪ್ರಕಾರ ನಮ್ಮ ತಂದೆಯ ಹೆಸರುಗಳನ್ನು ಪಹಣಿಗಳಲ್ಲಿ ದಾಖಲಿಸಬೇಕೆಂದು ಅನ್ನಿಸಲಿಲ್ಲ. ನನ್ನ ತಂದೆ ಮತ್ತು ಎಲ್ಲರು ಸೇರಿ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಬೋಗಸ್ ಕ್ರಯ ಪತ್ರ ಮಾಡಿಕೊಟ್ಟಿದ್ದರ ಬಗ್ಗೆ ಈ ದಾವೆ ಹಾಕಿದ ನಂತರ ಗೊತ್ತಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಹಾಕಿದ ನಂತರ ಗೊತ್ತಾಗಿರುತ್ತದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ನನ್ನ ಹಾಗೂ ಉಳಿದ ಎಲ್ಲರೂ ಸೇರಿ 8 ಮತ್ತು 9 ನೇ ಪ್ರತಿವಾದಿಯರಿಗೆ ಕ್ರಯ ಪತ್ರ ಮಾಡಿಕೊಟ್ಟಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 8 ಮತ್ತು 9 ನೇ ಪ್ರತಿವಾದಿಯರು ಖರೀದಿ ಹಿಡಿದಾಗಿನಿಂದಲೂ ಇವತ್ತಿನವರೆಗೂ ಅವರೇ ಕಬ್ಜೆಯಲ್ಲಿ ಇರುತ್ತರೆ ಎಂದರೆ ಸರಿಯಲ್ಲ. ವಾದಿಯರು ಮತ್ತು ನಾವುಗಳು ಸೇರಿ 8 ಮತ್ತು 9 ನೇ ಪ್ರತಿವಾದಿಯರ ಆಸ್ತಿಗಳನ್ನು ಹೊಡೆದು ಹಾಕುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** <u>7 ಮತ್ತು 10 ನೇ ಪ್ರತಿವಾದಿಯರ ಪರ ವಕೀಲರಿಂದ:</u>

(7 ಮತ್ತು 10 ನೇ ಪ್ರತಿವಾದಿಗಳ ಪರ ಶ್ರೀ ಕೆ.ಪಿ.ಟಿ. ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**